ಚಿಕ್ಕಲ್ಲೂರು ಗ್ರಾಮಕ್ಕೆ ಶಿಂಷಾ ಉಪನದಿಗೆ ಸೇತುವೆ ಬಗ್ಗೆ

೧೧೩೬. ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).— ಮಾನ್ಯ ಲೋಕೋಪಯೋಗಿ, ಅಚ್ಚು ಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಬ್ಬಿ ತಾಲ್ಲೂಕು ಕಡಬಾ ಹೋಬಳಿ ಕಲ್ಲೂರು ಹಾಗೂ ಚಿಕ್ಕಲ್ಲೂರು ಗ್ರಾಮಗಳ ಮಧ್ಯೆ ಶಿಂಷಾ ಉಪನದಿಯು ಹರಿಯುತ್ತಿರುವುದು ನಿಜವೇ ?

ಆ) ಕಲ್ಲೂರಿನಿಂದ ಚಿಕ್ಕಲ್ಲೂರಿಗೆ ಹೋಗಲು ಈ ನದಿಯಿಂದ ಗ್ರಾಮಸ್ಥರಿಗೆ ತೊಂದರೆ ಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಸದರಿ ನದಿಗೆ ಒಂದು ಸೇತುವೆಯನ್ನು ಕಟ್ಟಿಸಿಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಆ ಸೇತುವೆ ಕಟ್ಟಿಸಲು ಕ್ರಮ ಕೈಕೊಳ್ಳಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು).—

ಅ) ನಿಜ.

ಆ) ಬಂದಿದೆ.

ಇ) ಈ ಸೇತುವೆಯ ನಿರ್ಮಾಣದ ಅಂದಾಜು ಸುಮಾರು ೮ ಲಕ್ಷ ರೂ.ಗಳಾಗುತ್ತದೆ. ಆರ್ಥಿಕ ಲಭ್ಯತೆಯನ್ನಾಧರಿಸಿ ಬರುವ ವರ್ಷಗಳಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು

ಮ್ಯಾಕಲವಂಡ್ಲಿ ಚಿಕ್ಕ ನೀರಾವರಿ ಕೆಲಸ ಪ್ರಾರಂಭಿಸುವ ಬಗ್ಗೆ.

೧೧೨೦. ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಮ್ಯಾಕಲವಂಡ್ಲಿ ಸಣ್ಣ ನೀರಾವರಿ ಕೆರೆಯನ್ನು ನಿರ್ಮಿಸುವ ಕೆಲಸವನ್ನು ೧೯೮೬-೮೭ನೇ ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೂ ಕೂಡ ಅದಂ ಇದುವರೆಗೆ ಪ್ರಾರಂಭವಾಗಿಲ್ಲದಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ, ಸರ್ಕಾರದವರು ಆ ಕೆಲಸವನ್ನು ಯಾವಾಗ ಪ್ರಾರಂಭಿಸುವರು ಮತ್ತು ಈ ಯೋಜನೆ ಮುಗಿಸಲು ಎಷ್ಟು ಕಾಲಾವಕಾಶ ಬೇಕಾಗುವುದಂ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಅಂದಾಜಿಗೆ ಮುಂಜೂರಾತಿಯಾದ ನಂತರ, ಕ್ರಮ ತೆಗೆದುಕೊಳ್ಳಲಾಗುವುದಂ.

ವಿಶ್ವವಿದ್ಯಾನಿಲಯಗಳ ಮುದ್ರಣಾಲಯದ ನೌಕರರಿಗೆ ವಿಶ್ರಾಂತಿ ವೇತನದ ಬಗ್ಗೆ

೯೧೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಎಷ್ಟು ವಿಶ್ವವಿದ್ಯಾನಿಲಯಗಳ ಮುದ್ರಣಾಲಯದ ನೌಕರರಿಗೆ ವಿಶ್ರಾಂತಿ ವೇತನ ನೀಡಲಾಗುತ್ತಿದೆ ?

ಅ) ಈ ವಿಶ್ರಾಂತಿ ವೇತನಕ್ಕೆ ಸರಕಾರದವರು ಯಾವ ವರ್ಷದಲ್ಲಿ ಮಂಜೂರಾತಿ ನೀಡಿದ್ದಾರೆ?

ಇ) ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರಿಗೆ ವಿಶ್ರಾಂತಿ ವೇತನ ಸೌಲಭ್ಯ ನೀಡಲು ಸರಕಾರದವರು ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾನಿಲಯಗಳಲ್ಲಿ ಮುದ್ರಣಾಲಯದ ನೌಕರರಿಗೆ ವಿಶ್ರಾಂತಿ ವೇತನ ನೀಡಲಾಗುತ್ತಿದೆ.

ಆ) ಬೆಂಗಳೂರು ವಿಶ್ವವಿದ್ಯಾನಿಲಯ	...	೧-೪-೧೯೬೯
ಕರ್ನಾಟಕ ವಿಶ್ವವಿದ್ಯಾನಿಲಯ	...	೨೨-೧೨-೧೯೬೧

ಇ) ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣಾಲಯದ ನೌಕರರು ಭವಿಷ್ಯ ನಿಧಿ ಖಯೆಕತ4 ಕ.ರಾ.ವಿ. ಕಾಯ್ದೆ ಕಾರ್ಖಾನೆ ಮತ್ತು ಕಾರ್ಮಿಕ ಕಾಯ್ದೆ, ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಮುಂದ್ದಾ ಕ್ಕೆ ಳ್ಳಗಳಿಗೆ ಒಳಪಟ್ಟಿರುತ್ತಾರೆ. ಕರ್ನಾಟಕ ಸೇವಾ ನಿಯಮಾವಳಿಗಳನ್ನು (ಕೆ.ಸಿ.ಎಸ್ ಆರ್.ಾ ಮುದ್ರಣಾಲಯದ ನೌಕರರಿಗೆ ಅನ್ವಯಿಸುವಂತೆ ಮಾಡಿದರೆ ಮಾತ್ರ ನಿವೃತ್ತಿ ವೇತನ ಯೋಜನೆ(ಂ ಅರ್ಹರಾಗುತ್ತಾರೆ. ಇದಕ್ಕೆ ಕರಡು ಅಧಿನಿಯಮಗಳನ್ನು ವಿಶ್ವವಿದ್ಯಾನಿಲಯದವರ ೮ ರೂಪಿಗೆ ಸರ್ಕಾರದ ಮೂಲಕ ಕುಲಾಧಿಪತಿಗಳ ಸಮ್ಮತಿಗಾಗಿ ಕಳುಹಿಸಿಕೊಡಬೇಕಾಂ. ಇದರಂತೆ ಮೈಸೂರಸಿ ವಿಶ್ವವಿದ್ಯಾನಿಲಯಕ್ಕೆ ತಿಳಿಸಲಾಗಿದೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಾಮಗಾರಿಗಳ ಬಗ್ಗೆ.

೯೩೭. ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಲೋಕೋಪಯೋಗಿ, ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಅನೇಕ ಕಾಮಗಾರಿಗಳಿಗೆ ಆಯವ್ಯಯ ಮಂಜೂರಾತಿ ದೊರೆದ್ದರೂ, ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಆ) ಕೆಲವು ಕಾಮಗಾರಿಗಳು ಪ್ರಾರಂಭವಾಗಿದ್ದರೂ ಕೆಲಸ ಪೂರ್ಣವಾಗದೆ ಸ್ಥಗಿತಗೊಳ್ಳಲು ಕಾರಣವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಬೆಳ್ತಗಂಡಿ ತಾಲ್ಲೂಕಿನಲ್ಲಿ ೧೯೮೬-೮೭ ನೇ ಸಾಲಿನ ಆಯವ್ಯಯದಲ್ಲಿ ಸೇರಿರುವ ೫ ಕಾಮಗಾರಿಗಳ ಪೈಕಿ ೪ ಕಾಮಗಾರಿಗಳ ಅಂದಾಜು ಪಟ್ಟಿಗಳು ಮಂಜೂರಾಗಿದ್ದು, ೩ ಕೆಲಸಗಳನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿವೆ. ಒಂದು ಸೇತುವೆ ಕೆಲಸಕ್ಕೆ ಟೆಂಡರ್ ಕರೆಯಲಾಗಿದ್ದು, ಗುತ್ತಿಗೆದಾರರನ್ನು ನೇಮಿಸಬೇಕಾಗಿದೆ.

ಇನ್ನುಳಿದ ಒಂದು ರಸ್ತೆ ಸುಧಾರಣೆಯ ಕಾಮಗಾರಿಯು ಬದಲಾಗಿ ಸೇತುವೆ ನಿರ್ಮಿಸುವ ಬದಲೀ ಪ್ರಸ್ತಾವನೆ ಅನುಮೋದನೆಯಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಆ) ಪ್ರಾರಂಭಗೊಂಡ ಕಾಮಗಾರಿಗಳನ್ನು ಸ್ಥಗಿತಗೊಳಿಸಿರುವುದಿಲ್ಲ. ಅನುದಾನಕ್ಕನುಗುಣವಾಗಿ ಕಾಮಗಾರಿಗಳ ಪ್ರಗತಿಯನ್ನು ನಿರ್ವಹಿಸಲಾಗುತ್ತಿದೆ.